<u>ದಿನಾಂಕ : *14-02-2025* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>
**<u>ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರವಾಗಿ ಶ್ರೀ. ಬಿ.ಎ.ಎ ವಕೀಲರಿಂದ</u>**

ನಾನು ಈ ಕೆಳಕಂಡ ದಾಖಲೆಗಳನ್ನು ಗುರುತಿಸುತ್ತೇನೆ.

ನಿಪಿ-1 : ಪ್ರ.ವ.ವ ಯ ದೃಢಿಕೃತ ಪ್ರತಿ.

ನಿಪಿ-2 : ದೂರಿನ ದೃಢಿಕೃತ ಪ್ರತಿ.

ನಿಪಿ-3 : ಅಂತಿಮ ವರದಿಯ ದೃಢಿಕೃತ ಪ್ರತಿ.

ನಿಪಿ-4 : ಅಪರಾದ ವಿವರದ ದೃಢಿಕೃತ ಪ್ರತಿ.

ನಿಪಿ-5 : ಎಂ ವಿ ವರದಿಯ ದೃಢಿಕೃತ ಪ್ರತಿ.

ನಿಪಿ-6: ಗಾಯದ ಪ್ರಮಾಣ ಪತ್ರದ ದೃಢಿಕೃತ ಪ್ರತಿ.

ನಿಪಿ-7 ರಿಂದ 9 : ಸಾಕ್ಷಿದಾರರ ಹೇಳಿಕೆಗಳ ದೃಢಿಕೃತ ಪ್ರತಿಗಳು.

ನಿಪಿ-10 : ಪೋಲೀಸ ಇನಫಾರ್ಮೆಷನ್ ಲೆಟರ ಇದರ ದೃಢಿಕೃತ ಪ್ರತಿ

ನಿಪಿ-11 : ವಾಹನ ತಡೆ ಪಂಚನಾಮೆಯ ಮತ್ತು ಪೋಟೋಗಳ ದೃಢಿಕೃತ ಪ್ರತಿಗಳು

ನಿಪಿ-12 : ವೈದ್ಯಕೀಯ ಬಿಲ್ಲುಗಳು (ಒಟ್ಟು )

ನಿಪಿ-13 : ವೈದ್ಯಕೀಯ ಸಲಹಾ ಚೀಟಿಗಳು ( ಒಟ್ಟು )

ಅರ್ಜಿಯಲ್ಲಿ ಕೋರಿರುವಂತೆ ಆದೇಶ ಮಾಡಬೆಂದು ಕೋರುತ್ತೇನೆ.

ಪಾಟೀ ಸವಾಲು : 2 ನೇ ಎದುರುದಾರರ ಪರ ಶ್ರೀ ಎಮ್ ಎಸ್ ಹಚ್ ವಕೀಲರಿಂದ

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನು ನೀಡಿರುತ್ತೇನೆ. ಅಪಘಾತವಾಗುವ ಸಂದರ್ಬದಲ್ಲಿ ನಾನು ಟಾಟಾ ಎಸ್ ವಾಹನದಲ್ಲಿ ಹೊರಟಿದ್ದೇನು. ಆ ದಿನ ವಾಹನವನ್ನು 3 ನೇ ಎದುರುದಾರರು ಚಲಾಯಿಸುತ್ತಿದ್ದರು. ನಾನು ಹೊರಟಾಗ ಬೆಳಿಗ್ಗೆ 4 ಗಂಟೆಯಾಗಿತ್ತು. ನಾನು ವಾಹನದಲ್ಲಿ ಮುಂದೆ ಕುಳಿತಿದ್ದೇನು. ಅಪಘಾತ ಯಾವಾಗ ಆಯಿತು ಎಂದು ನೆನಪಿರುವುದಿಲ್ಲ. ಅಪಘಾತವಾದ ಜಾಗೆಯು ಯಾವುದು ಎಂದು ಗೊತ್ತಿರುವುದಿಲ್ಲ. ಅಪಘಾತ ಹೇಗೆ ಆಗಿರುತ್ತದೆ ಎಂದು ಗೊತ್ತಿರುವುದಿಲ್ಲ. ಅಪಘಾತ ಹೇಗೆ ಆಗಿದೆ ಎಂದು ಗೊತ್ತಿರದೇ ಇರುವುದರಿಂದ ನಾನು ಆ ವಾಹನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹೊರಟಿದ್ದ ವಾಹನಕ್ಕೆ ಲೈಟ ಇತ್ತು. ಆ ವಾಹನದ ಲೈಟ ಡಿಮ್ ಇತ್ತು ಮತ್ತು ಸರಿಯಾಗಿ ಕಾಣುತ್ತಿರಲಿಲ್ಲ ಎಂದರ ಸರಿಯಲ್ಲ. ಅಪಘಾತವನ್ನು ನಾನು ನೋಡಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ಅದು ಎಲ್ಲಿ ಆಯಿತು ಎಂದು ಕೇಳಿದ್ದೀರಾ ಎಂದರೆ ಸಾಕ್ಷಿದಾರರು ಗುಡಿಯ ಹತ್ತಿರ ಆಗಿರುತ್ತದೆ ಎಂದು ಹೇಳುತ್ತಾರೆ. ಸದರಿ ಗುಡಿಯು ಸಂಗಮ ಕ್ರಾಸ ಹತ್ತಿರ ಇರುತ್ತದೆ. ನಿಂತ ವಾಹನಕ್ಕೆ ನಾವು ಚಲಾಯಿಸುತ್ತಿದ್ದ

ವಾಹನವು ಡಿಕ್ಕಿ ಪಡಿಸಿರುತ್ತದೆ ಎಂದರೆ ಸರಿಯಲ್ಲ. ನಮ್ಮ ವಾಹನಕ್ಕೆ ಯಾವ ವಾಹನವು ಡಿಕ್ಕಿ ಪಡಿಸಿರುತ್ತದೆ ಎಂದು ಕೇಳಿರುವುದಿಲ್ಲ. ನನಗೆ ಪರಿಹಾರ ಬರಲೆಂದು 3 ನೇ ಎದುರುದಾರರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ. 3 ನೇ ಎದುರುದಾರರ ತಪ್ಪು ಇದೆ ಎಂದು ಅವರನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. 3 ನೇ ಎದುರುದಾರರನ್ನು ಅಂತಿಮ ವರದಿಯಲ್ಲಿ ಆರೋಪಿ ಎಂದು ತೋರಿಸಿರುತ್ತಾರೆ. 3 ನೇ ಎದುರುದಾರರ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದರೆ ಸಾಕ್ಷಿದಾರರು ಆಕಸ್ಮಿಕವಾಗಿ ಆಗಿರುತ್ತದೆ ಎಂದು ಹೇಳುತ್ತಾರೆ. 3 ನೇ ಎದುರುದಾರರ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದರೆ ಸರಿ. ಅಪಘಾತವಾದಾಗ ನನಗೆ ಮುಖಕ್ಕೆ ಮತ್ತು ಕಾಲಿಗೆ ಪೆಟ್ಟಾಗಿತ್ತು. ಅಪಘಾತವಾದಾಗ ಪ್ರಜ್ಞೆ ಇರಲಿಲ್ಲ. ಅಪಘಾತವಾದ ನಂತರ ನನ್ನನ್ನು ಕಟ್ಟಿ ಆಸ್ಪತ್ರೆಗೆ ಸೇರಿಸಿದ್ದರು. ನನ್ನ ಕಾಲು ಮುರಿದಿದೆ ಎಂದು ವೈದ್ಯರು ಹೇಳಿದ್ದರು. ನನ್ನ ಮೊಣಕಾಲಿಗೆ ಮತ್ತು ಮುಖಕ್ಕೆ ಆಪರೇಷನ ಮಾಡಿರುತ್ತಾರೆ. ಸಾಕ್ಷಿದಾರರು ಮುಂದುವರೆದು ರಾಡ್ ಹಾಕಿರುತ್ತಾರೆ ಎಂದು ಹೇಳುತ್ತಾರೆ. ನಾನು 20 ರಿಂದ 25 ದಿನಗಳ ಕಾಲ ಒಳರೋಗಿಯಾಗಿ ದಾಖಲಾಗಿದ್ದೇನು. ನಾನು ಈಗ ಕೆಲಸಕ್ಕೆ ಹೋಗುವುದಿಲ್ಲ. ನಾನು ತಕರಾರಿ ಮಾರಾಟ ಮಾಡುತ್ತಿದ್ದೆ. ಈ ಕುರಿತು ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ತಿಂಗಳಿಗೆ 25 ಸಾವಿರ ರೂ. ದುಡಿಯುತ್ತಿದ್ದೆ ಎಂದು ತೋರಿಸಲು ದಾಖಲೆಯನ್ನು ಸಲ್ಲಿಸಿರುವುದಿಲ್ಲ. ನಾನು ಹಾಜರು ಪಡಿಸಿರುವ ವೈದ್ಯಕೀಯ ಬಿಲ್ಲುಗಳು ಮತ್ತು ವೈದ್ಯಕೀಯ ಸಲಹಾ ಚೀಟಿಗಳು ಖೊಟ್ಟಿ ಆಗಿರುತ್ತವೆ ಎಂದರೆ ಸರಿಯಲ್ಲ. ನನ್ನ ವಯಸ್ಸು 29 ಎಂದು ತೋರಿಸಲು ದಾಖಲೆಯನ್ನು ಸಲ್ಲಿಸಿರುವುದಿಲ್ಲ. 3 ನೇ ಎದರುದಾರರ ತಪ್ಪಿನಿಂದ ಅಪಘಾತ ವಾಗಿರುವುದರಿಂದ ಅವರೇ ಪರಿಹಾರವನ್ನು ಕೊಡಲು ಭಾದ್ಯಸ್ತರು ಎಂದರೆ ಸರಿಯಲ್ಲ. 3 ನೇ ಎದರುದಾರರ ವಾಹನಕ್ಕೆ ವಿಮೆ ಇದ್ದರೆ ಅವರನ್ನು ಕೂಡ ಪಕ್ಷಗಾರನ್ನಾಗಿ ಮಾಡುತ್ತಿದ್ದೆ ಎಂದರೆ ಸರಿ. ನಾನು ಮೊದಲಿನ ರೀತಿ ಆರೋಗ್ಯವಾಗಿದ್ದು ಪರಿಹಾರಕ್ಕೊಸ್ಕರ ಸುಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : 3 ನೇ ಎದುರುದಾರರು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದು ಕೊಳ್ಳಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

HANAMANTARAO R KULKARNI

Digitally signed by HANAMANTARAO R KULKARNI
Date: 2025.02.15 17:38:13 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.